147ನೇ ಅಧಿವೇಶನ
ನಿ-330 ಕುಂದಾಪುರ
ಕ್ರ-51

**ಮಾನ್ಯ ವಿಧಾನ ಪರಿಷತ್ತಿ ಸದಸ್ಯರಾದ ಶ್ರೀ ಮಂಜುನಾಥ ಬಂಡಾರಿ ಇವರ ನಿಯಮ-330ರ ಅಡಿಯಲ್ಲಿ ಕೋರಿರುವ ಪ್ರಶ್ನೆಗೆ ಉತ್ತರ ಸಲ್ಲಿಸುವ ಬಗ್ಗೆ**

**ಪ್ರಶ್ನೆ**

ಕರ್ನಾಟಕ ರಾಜ್ಯದ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರುಗಳು ಪ್ರಸ್ತುತ 13500 ದಿಂದ ಗರಿಷ್ಠ 16000 ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಪ್ರಸ್ತುತ ಕನಿಷ್ಠ 6000 ದಿಂದ ಗರಿಷ್ಠ 9000 ವೇತನ ಪಡೆಯುತ್ತಿದ್ದಾರೆ. ವಿಶೇಷ ಶಿಕ್ಷಕರು, ವಿಶೇಷ ಮಕ್ಕಳ ಶಿಕ್ಷಣದಲ್ಲಿ ಡಿಪ್ಲೋಮ ಪಡೆದು ಆರ್.ಸಿ.ಐ. ನೊಂದಣಿ ಮಾಡಿರುತ್ತಾರೆ. ಇತರೇ ಸಾಮಾನ್ಯ ಶಿಕ್ಷಕರಿಗಿಂತ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹೆಚ್ಚಿನ ಶ್ರಮವಹಿಸುವ ಇವರಿಗೆ ಕಾರ್ಮಿಕ ಇಲಾಖೆಯು, ಸಂಘಟಿತ ಕಾರ್ಮಿಕರಿಗೆ ನಿಗದಿ ಪಡಿಸಿರುವಷ್ಟು ಕನಿಷ್ಠ ಮೊತ್ತದ ವೇತನವೂ ಸಹ ಲಭಿಸುತ್ತಿಲ್ಲ.

2001 ರಿಂದ ಶಿಕ್ಷಕ ಹಾಗೂ ಶಿಕ್ಷಕೇತರರು, ವೇತನ ಹಾಗೂ ಸೇವಾ ಭದ್ರತೆಗಾಗಿ ಸಂಘಟನೆಯೊಂದಿಗೆ ಹೋರಾಟ ನಡೆಸಿದರೂ ಈವರೆಗೆ ಕಾಲಕಾಲಕ್ಕೆ ವೇತನ ಭತ್ಯೆ ಪರಿಷ್ಕರಣೆಯಾಗಿಲ್ಲ. ಸಾಮಾನ್ಯ ಶಾಲಾ ಶಿಕ್ಷಕರಿಗೆ ಸಿಗುವ ಯಾವುದೇ ಸೇವಾ ಸೌಲಭ್ಯವಾಗಲೀ, ಸೇವಾ ಭದ್ರತೆಯಾಗಲೀ ಮತ್ತು ಉತ್ತಮ ವೇತನವಾಗಲೀ ಸಿಕ್ಕಿರುವುದಿಲ್ಲ. ಆದ್ದರಿಂದ ಸಮಾನ ಕೆಲಸಕ್ಕೆ ಸಮಾನ ವೇತನತತ್ವದ ಕರ್ನಾಟಕ ರಾಜ್ಯದ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರುಗಳು ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ಇತರೇ ಸಾಮಾನ್ಯ ಶಾಲಾ ಶಿಕ್ಷಕರಂತೆ ವೇತನ ಭತ್ಯೆ ನಿಗದಿಪಡಿಸಿ, ಸೂಕ್ತ ಸೇವಾ ಭದ್ರತೆ ನೀಡುವ ಅಗತ್ಯತೆಯನ್ನು ನಿಯಮ 330ರ ಅಡಿಯಲ್ಲಿ ಸದನದಲ್ಲಿ ಚರ್ಚಿಸಲು ಅನುಮತಿಯನ್ನು ಕೋರಿದೆ.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ:ಮಮಇ 109 ಪಿಹೆಚ್‌ಪಿ 2010 ದಿನಾಂಕ:14.12.2010 ರಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ನೀತಿ, ರಾಷ್ಟ್ರೀಯ ಶಿಕ್ಷಣ ನೀತಿ, ಅಂಗವಿಕಲ ಅಧಿನಿಯಮ 1995 ರನ್ವಯ 06 ರಿಂದ 18 ವಯೋಮಿತಿಯ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ನೀಡುವುದನ್ನು ಮನಗಂಡ ಸರ್ಕಾರವು 2010-11ನೇ ಸಾಲಿನಿಂದ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯನ್ನು ಜಾರಿಗೊಳಿಸಲಾಗಿದೆ.

1. **ಸರ್ಕಾರದ ಆದೇಶ ಸಂಖ್ಯೆ: ಮಮಇ 107 ಪಿಹೆಚ್‌ಪಿ 2014 ದಿನಾಂಕ:23.7.2014**

| ಕ್ರಸಂ | ಶಾಲೆಯ ವಿಧ | ಮಾಹೆಯಾನ ಅನುದಾನ (ಪ್ರತಿ ಮಗುವಿಗೆ) |
|---|---|---|
| 1 | ಬುದ್ದಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ರೂ.5,000/- |
| 2 | ಬುದ್ದಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ರೂ.4,000/- |
| 3 | ಅಂಧ / ಕಿವುಡು ಮಕ್ಕಳ ವಸತಿಯುತ ಶಾಲೆ | ರೂ.5,000/- |
| 4 | ಅಂಧ / ಕಿವುಡು ಮಕ್ಕಳ ವಸತಿರಹಿತ ಶಾಲೆ | ರೂ.4,000/- |
| 5 | ವೃತ್ತಿ ತರಬೇತಿ ಕೇಂದ್ರ ವಸತಿಯುತ ಶಾಲೆ | ರೂ.5,000/- |
| 6 | ವೃತ್ತಿ ತರಬೇತಿ ಕೇಂದ್ರ ವಸತಿರಹಿತ ಶಾಲೆ | ರೂ.4,000/- |

ಸದರಿ ಆದೇಶದಂತೆ ಬುದ್ದಿಮಾಂದ್ಯ, ದೃಷ್ಠಿದೋಷ ಹಾಗೂ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ರೂ.5000/-ಗಳು, ವಸತಿರಹಿತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ರೂ. 4000/-ಗಳನ್ನು ನಿಗದಿಪಡಿಸಿದ್ದು, ಸದರಿ ಅನುದಾನದಲ್ಲಿ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಗೌರವಧನ, ಕಟ್ಟಡ, ಬಾಡಿಗೆ, ಮಕ್ಕಳ ಪಥ್ಯಾಹಾರ ವೆಚ್ಚ, ಸಾರಿಗೆ ವೆಚ್ಚ, ವೈದ್ಯಕೀಯ ವೆಚ್ಚ, ಸಮವಸ್ತ್ರ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಒಳಗೊಂಡಿರುತ್ತದೆ.

2. **ಸರ್ಕಾರದ ಆದೇಶ ಸಂಖ್ಯೆ: ಮಮಇ 122 ಪಿಹೆಚ್‌ಪಿ 2016 ದಿನಾಂಕ:05.05.2016**

| ಕ್ರ.ಸಂ | ಶಾಲೆಯ ವಿಧ | ಮಾಹೆಯಾನ ಅನುದಾನ |
|---|---|---|
| 1 | ಬುದ್ದಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ರೂ.5,600/- |
| 2 | ಬುದ್ದಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ರೂ.4,800/- |
| 3 | ಅಂಧ /ಕಿವುಡು ಮಕ್ಕಳ ವಸತಿಯುತ ಶಾಲೆ | ರೂ.5,600/- |
| 4 | ಅಂಧ /ಕಿವುಡು ಮಕ್ಕಳ ವಸತಿರಹಿತ ಶಾಲೆ | ರೂ.4,800/- |

ಬುದ್ದಿಮಾಂದ್ಯ, ಶ್ರವಣದೋಷ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಬೇಡಿಕೆಯಂತೆ 2014-15ನೇ ಸಾಲಿನಲ್ಲಿ ಅನುದಾನದ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ: ಮಮಇ 90 ಪಿಹೆಚ್‌ಪಿ 2017, ದಿನಾಂಕ: 28.10.2017ರ ಆದೇಶದಲ್ಲಿ ಅಂಧ ಮತ್ತು ಶ್ರವಣದೋಷವುಳ್ಳ ವಸತಿಯುತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ರೂ. 6200/- ಹಾಗೂ ವಸತಿ ರಹಿತ ಶಾಲೆಯ ಪ್ರತಿ ಮಗುವಿಗೆ ಮಾಸಿಕ ಅನುದಾನ ರೂ. 6800/-ಗಳಿಗೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ.

3. **ಸರ್ಕಾರದ ಆದೇಶ ಸಂಖ್ಯೆ: ಮಮಇ 90 ಪಿಹೆಚ್‌ಪಿ 2017 ದಿನಾಂಕ:28.10.2017**

| ಕ್ರ.ಸಂ | ಶಾಲೆಯ ವಿಧ | ಮಾಹೆಯಾನ ಅನುದಾನ |
|---|---|---|
| 1 | ಬುದ್ದಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ರೂ.6,800/- |
| 2 | ಬುದ್ದಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ರೂ.6,000/- |
| 3 | ಅಂಧ /ಕಿವುಡು ಮಕ್ಕಳ ವಸತಿಯುತ ಶಾಲೆ | ರೂ.6,200/- |
| 4 | ಅಂಧ /ಕಿವುಡು ಮಕ್ಕಳ ವಸತಿ ರಹಿತ ಶಾಲೆ | ರೂ.5,200/- |
| 5 | ಆಟಿಸಂ ಮಕ್ಕಳ ಹಗಲು ಯೋಗ ಕ್ಷೇಮಕೇಂದ್ರ | ರೂ.10,000/- |
| 6 | ವೃತ್ತಿ ತರಬೇತಿ ಕೇಂದ್ರ ವಸತಿಯುತ ಶಾಲೆ | ರೂ.6,200/- |
| 7 | ವೃತ್ತಿ ತರಬೇತಿ ಕೇಂದ್ರ ವಸತಿರಹಿತ ಶಾಲೆ | ರೂ.5,200/- |

ಸರ್ಕಾರದ ಆದೇಶ ಸಂಖ್ಯೆ: ಮಮಇ 153 ಪಿಹೆಚ್‌ಪಿ 2020 ಬೆಂಗಳೂರು, ದಿನಾಂಕ: 14.09.2022ರಲ್ಲಿ ಈ ಕೆಳಕಂಡಂತೆ ಪ್ರತಿ ಮಗುವಿಗೆ ನೀಡುತ್ತಿದ್ದ ಮಾಸಿಕ ಅನುದಾನ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ,

4. **ಸರ್ಕಾರದ ಆದೇಶ ಸಂಖ್ಯೆ: ಮಮಇ 153 ಪಿಹೆಚ್‌ಪಿ 2020 ದಿನಾಂಕ:14.09.2022**

| ಕ್ರ.ಸಂ | ಶಾಲೆಯ ವಿಧ | ಪ್ರಸ್ತುತ ನೀಡಲಾಗುತ್ತಿರುವ ಮಾಹೆಯಾನ ಅನುದಾನ | ಶೇ.50ರಷ್ಟು ಪರಿಷ್ಕರಿಸಿದ ಮೊತ್ತ |
|---|---|---|---|
| 1 | ಬುದ್ದಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ರೂ.6,800/- | ರೂ.10,200/- |
| 2 | ಬುದ್ದಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ರೂ.6,000/- | ರೂ.9,000/- |
| 3 | ಅಂಧ /ಕಿವುಡು ಮಕ್ಕಳ ವಸತಿಯುತ ಶಾಲೆ | ರೂ.6,200/- | ರೂ.9,300/- |
| 4 | ಅಂಧ /ಕಿವುಡು ಮಕ್ಕಳ ವಸತಿರಹಿತ ಶಾಲೆ | ರೂ.5,200/- | ರೂ.7,800/- |
| 5 | ಆಟಿಸಂ ಮಕ್ಕಳ ಹಗಲು ಯೋಗಕ್ಷೇಮಕೇಂದ್ರ | ರೂ.10,000/- | ರೂ.15,000/- |

ಸದರಿ ಆದೇಶಗಳಂತೆ ಪ್ರತಿ 07 ಬುದ್ಧಿಮಾಂದ್ಯ ಅಥವಾ ಸ್ಪ್ಯಾಸ್ಟಿಕ್ ಮಕ್ಕಳಿಗೆ ಒಬ್ಬ ಶಿಕ್ಷಕರು, 10 ಶ್ರವಣದೋಷವುಳ್ಳ ಮಕ್ಕಳಿಗೆ ಒಬ್ಬ ಶಿಕ್ಷಕರು, 12 ದೃಷ್ಟಿದೋಷವುಳ್ಳ ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ಮಕ್ಕಳ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರನ್ನು ನೇಮಿಸಿಕೊಂಡಿದ್ದು, ವಿಶೇಷ ಮಕ್ಕಳ ಪಾಲನೆಗಾಗಿ ನಡೆಸುತ್ತಿರುವ ಸಂಸ್ಥೆಗಳಿಗೆ ಪಾಲನಾ ವೆಚ್ಚ ಹಾಗೂ ಶಿಕ್ಷಕರ ಸಂಭಾವನೆಗಳನ್ನು ಒಳಗೊಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಅಂಗವಿಕಲ ಮಕ್ಕಳ ಶಿಶುಕೇಂದ್ರಿಕೃತ ವಿಶೇಷ ಶೈಕ್ಷಣಿಕಯೋಜನೆಯಡಿ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳಿಗೆ ಗೌರವಧನದ ಆಧಾರದ ನೇಮಿಸಿಕೊಂಡಿರುವುದರಿಂದ ಇತರೇ ಸಾಮಾನ್ಯ ಶಾಲಾ ಶಿಕ್ಷಕರಂತೆ ವೇತನ ಭತ್ಯೆ ನಿಗದಿಪಡಿಸಿ, ಸೂಕ್ತ ಸೇವಾ ಭದ್ರತೆ ನೀಡುವ ಅವಕಾಶ ಸದರಿ ಯೋಜನೆಯ ನಿಯಮಗಳಲ್ಲಿ ಇರುವುದಿಲ್ಲ.

**ಸಂಖ್ಯೆ: ಮಮಇ 217 ಪಿಹೆಚ್‌ಪಿ 2022**

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು